## *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ*
## *ನ್ಯಾಯಾಲಯ, ಮೈಸೂರು*

*ಎಸ್‌ಸಿ.* **34/2018**

| | | |
|---|---|---|
| **ಸಾಕ್ಷಿದಾರರ ಹೆಸರು** | **:** ಶ್ರೀ ಅಮೃತ್ ಡಿ | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | **:** ಶ್ರೀ ದೇವರಾಜಾಚಾರಿ | **29.03.2021** |
| **ವಯಸ್ಸು** | **:** 35 ವರ್ಷ | |
| **ವೃತ್ತಿ** | **:** ಮರ ಕೆಲಸ | **ಪ್ರಾ.ಸಾ. : 23** |
| **ವಾಸಸ್ಥಳ** | **:** ಮೈಸೂರು | **ಚಾ.ಸಾ. : 35** |

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

*1.* ನಾನು ಕಳೆದ *25* ವರ್ಷಗಳಿಂದ ಉದಯಗಿರಿಯಲ್ಲಿ ಮರ ಕೆಲಸ ಮಾಡುತ್ತಿದ್ದೇನೆ. ಮೃತ ರಾಜು ನನ್ನ ಸಹಪಾಠಿಯಾಗಿ ವಿದ್ಯಾಭ್ಯಾಸ ಮಾಡಿದ್ದರು. ಮೃತ ರಾಜು ಅವರು ಎಲೆಕ್ಟ್ರೀಕಲ್ ಕೆಲಸ ಮಾಡುತ್ತಿದ್ದರು. ಮರ ಕೆಲಸ ಇದ್ದಾಗ ನನಗೆ ಕರೆಸುತ್ತಿದ್ದರು. *2016* ನೇ ಸಾಲಿನಲ್ಲಿ ನಾನು ಮಂಡ್ಯದಲ್ಲಿ ಕೆಲಸ ಮಾಡುತ್ತಿದ್ದಾಗ ರಾತ್ರಿ *08.00* ರ ವೇಳೆಗೆ ರಾಜು ಅವರ ಕೊಲೆ ಆದ ಬಗ್ಗೆ ಮಾಹಿತಿ ಬಂದಿತ್ತು. ಸ್ಥಳ ಮತ್ತು ಕೊಲೆ ಆದ ರೀತಿ ತಿಳಿದಿರಲಿಲ್ಲ. ನಾನು ಮನೆಗೆ ವಾಪಸ್ ಬಂದಾಗ ಶವವನ್ನು ಮರಣೋತ್ತರ ಪರಿಕ್ಷೇಗೆ ತೆಗೆದುಕೊಂಡು ಹೊಗಿದ್ದ ಬಗ್ಗೆ ತಿಳಿಯಿತು. ಆದರೆ, ಮೃತನ ಶವ ನೋಡಲು ಸಿಕ್ಕಿಲ್ಲ. ರಾಜುವನ್ನು ಕೊಲೆ ಮಾಡಿದ ಕಾರಣ ತಿಳಿದಿಲ್ಲ. ರಾಜು ಅವರು ಸಂಘಟಕರಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ಗೊತ್ತಿಲ್ಲ. ಆರೋಪಿಗಳನ್ನು ನಾನು ನೋಡಿಲ್ಲ. ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

**1.** ರಾಜು ಅವರು ಆರ್ ಎಸ್ ಎಸ್ ಸಂಘಟಕರಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತು ಎಂದರೆ ಸರಿ. ನನಗೆ ಆರ್ ಎಸ್ ಎಸ್ ಸಂಘಟನೆಗೆ ಸೇರುವಂತೆ ಹೇಳಿದ್ದರು ಆದರೆ ನಾನು ಕೆಲಸದ ಒತ್ತಡದಿಂದ ಸೇರಿರಲಿಲ್ಲ. **2009** ನೇ ಸಾಲಿನಲ್ಲಿ ಉದಯಗಿರಿ ಪೊ.ಠಾಣೆ ವ್ಯಾಪ್ತಿಗೆ ಒಳಪಡುವ ಕ್ಯಾತಮಾರನಹಳ್ಳಿಯ ರಾಜು ಅವರ ಮನೆಯ ಬಳಿ ಇರುವ ಹಲೀಮ ಸಾಧಿಯ ಎಜುಕೇಷನ್ ಟ್ರಸ್ಟ್ ನ ಮದರಸದ ಕಟ್ಟಡದಲ್ಲಿ ಅಕ್ರಮವಾಗಿ ಮಸೀದಿ ಕಟ್ಟುತ್ತಿದ್ದ ಬಗ್ಗೆ ರಾಜು ಅವರು ಕಾನೂನು ಬದ್ಧವಾಗಿ ಹೋಟಾರ ಮಾಡುತ್ತಿದ್ದ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಘಟನೆ ಸಂಬಂಧವಾಗಿ ರಾಜು ಮತ್ತು ಇತರರ ವಿರುದ್ಧ ಪ್ರಕರಣ ದಾಖಲು ಆಗಿತ್ತು ಎಂದರೆ ಸರಿಯಲ್ಲ. ಅದೇ ಕಾರಣ ಮುಸ್ಲಿಂ ಸಮುದಾಯದವರು ರಾಜುವನ್ನು ದ್ವೇಷ ಮಾಡುತ್ತಿದ್ದ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**2.** ಹುಣಸೂರು ಜೋಡಿ ಹುಡುಗರ ಕೊಲೆ ಪ್ರಕರಣದಲ್ಲಿ ಆರೋಪಿಗಳು ಹಾಗೂ ಅವರ ಕಡೆಯವರು ರಾಜು ಅವರಿಗೆ ಬೇದರಿಕೆ ಹಾಕಿದ್ದು ನನಗೂ ಭಯ ಇದ್ದು ರಾಜು ಅವರು ನನಗೆ ಧೈರ್ಯ ನೀಡುತ್ತಿದ್ದ ಬಗ್ಗೆ ಮತ್ತು ಪೋಲಿಸರಿಗೆ ದೂರು ನೀಡುವಂತೆ ರಾಜು ಅವರಿಗೆ ತಿಳಿಸಿದ್ದೆ ಎಂದರೆ ಸರಿಯಲ್ಲ. ದಿನಾಂಕ **13.03.2016** ರಂದು ಉದಯಗಿರಿ ಎಂ ಜಿ ರಸ್ತೆಯಲ್ಲಿ ಇರುವ ವಿನಾಯಕ ಟೀ ಸ್ಟಾಲ್ ಮುಂಭಾಗ ಬೆಂಚಿನ ಮೇಲೆ ಟೀ ಕುಡಿಯುತ್ತಿದ್ದಾಗ ಅಪರಿಚಿತ ವ್ಯಕ್ತಿಗಳು ರಾಜು ಅವರನ್ನು ಕೊಲೆ ಮಾಡಿದ ಬಗ್ಗೆ ನನಗೆ ತಿಳಿದಿದ್ದು ಈ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮುಸ್ಲಿಂ ಜನಾಂಗದ ವ್ಯಕ್ತಿಗಳು ರಾಜು ಅವರನ್ನು ಕೊಲೆ ಮಾಡಿದ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗ ತೋರಿಸಿದ ಫೋಟೋದಲ್ಲಿ ನಾನು ಮತ್ತು ರಾಜು ಹಾಗೂ ಇತರರು ಕಂಡುಬರುತ್ತೇವೆ ಎಂದರೆ ಸರಿ. ಸದರಿ ಫೋಟೋವನ್ನು ನಿಪಿ-**36** ಎಂದು

ಗುರುತಿಸಲಾಯಿತು. ಘಟನೆ ಬಗ್ಗೆ ಮಾಹಿತಿ ಇದ್ದರೂ ಸಹ ನಾನು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳಿದೆದಃನೆ ಎಂದರೆ ಸರಿಯಲ್ಲ.

**3.** ರಾಜು ಅವರು ಹಿಂದುಪರ ಹೋರಾಟ ಮಾಡತ್ತಿದ್ದ ಕಾರಣ ಅವರ ಕೊಲೆ ಮಾಡಿದ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ಮುಸ್ಲಿಂ ಜನಾಂಗದ ಯುವಕರು ರಾಜು ಅವರನ್ನು ಕೊಲೆ ಮಾಡಿದ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ನನಗೆ ಈಗ ಓದಿ ಹೇಳಿದಂತೆ ನಿಪಿ-**37** ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ಆರೋಪಿಗಳ ಪರ ವಕೀಲರಿಂದಃ- ಇಲ್ಲ.</u>

*ಮರು ವಿಚಾರಣೆಃ- ಇಲ್ಲ.*

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು.*